# ಅಧ್ಯಾಯ–V
# ಇತರ ತೆರಿಗೆ/ತೆರಿಗೆಯೇತರ ಸ್ವೀಕೃತಿಗಳು

## 5.1 ತೆರಿಗೆ ನಿರ್ವಹಣೆ

ಈ ಅಧ್ಯಾಯವು ರಾಜ್ಯ ಅಬಕಾರಿ, ಮೋಟಾರು ವಾಹನಗಳು ಮತ್ತು ಗಣಿಗಾರಿಕೆ ಚಟುವಟಿಕೆಗಳ ಮೇಲಿನ ತೆರಿಗೆಗಳಿಂದ ಬರುವ ಸ್ವೀಕೃತಿಗಳನ್ನು ಒಳಗೊಂಡಿದೆ. ತೆರಿಗೆ/ರಾಜಸ್ವವನ್ನು ಪ್ರತಿಯೊಂದು ರಾಜಸ್ವ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ರೂಪಿಸಲಾಗಿರುವ ಅಧಿನಿಯಮಗಳು ಹಾಗೂ ನಿಯಮಗಳು ನಿರ್ವಹಿಸುತ್ತವೆ.

## 5.2 ಲೆಕ್ಕಪರಿಶೋಧನೆಯ ಫಲಿತಾಂಶಗಳು

2013–14ರಲ್ಲಿ, ಅಬಕಾರಿ ಇಲಾಖೆಯ 18 ಕಚೇರಿಗಳು, ಮೋಟಾರು ವಾಹನಗಳ ಮೇಲಿನ ತೆರಿಗೆಗಳಿಗೆ ಸಂಬಂಧಿಸಿದಂತೆ 51 ಕಚೇರಿಗಳು, ವಿದ್ಯುಚ್ಛಕ್ತಿ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ಒಂದು ಕಚೇರಿ, ಖನಿಜ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ 14 ಕಚೇರಿಗಳ ಪರೀಕ್ಷಾ ಪರಿಶೀಲನೆಯು 229 ಪ್ರಕರಣಗಳಲ್ಲಿ ₹ 166.29 ಕೋಟಿ ಮೊತ್ತವು ಒಳಗೊಂಡಂತೆ ರಾಜಸ್ವವು ವಸೂಲಾತಿಯಾಗದಿದ್ದುದು/ಕಡಿಮೆ ಪ್ರಮಾಣದಲ್ಲಿ ವಸೂಲಾತಿಯಾಗಿರುವುದನ್ನು ತೋರಿಸಿಕೊಟ್ಟಿತು, ಅವು ಈ ಕೆಳಗಿನ ಕೋಷ್ಟಕ 5.1ರಲ್ಲಿ ನೀಡಲಾಗಿರುವ ಪ್ರವರ್ಗಗಳ ಅಡಿಯಲ್ಲಿ ಬರುತ್ತವೆ:

**ಕೋಷ್ಟಕ 5.1**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಪ್ರವರ್ಗ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| | **ರಾಜ್ಯ ಅಬಕಾರಿ** | | |
| 01. | ಆರ್‌ಎಸ್–2 ಪರವಾನಿಗೆಯ ಮೇಲಿನ ಪರವಾನಿಗೆ ಶುಲ್ಕವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 03 | 1.60 |
| 02. | ಐಎಂಎಲ್ ಅನ್ನು ಕಡಿಮೆ ಪ್ರಮಾಣದಲ್ಲಿ ಸಾಗಣೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು | 04 | 2.28 |
| 03. | ಪರವಾನಿಗೆಯ ನವೀಕರಣ/ನೀಡಿಕೆಯ ಮೇಲೆ ಮುದ್ರಾಂಕ ಶುಲ್ಕವನ್ನು ವಸೂಲಾತಿ ಮಾಡದಿದ್ದುದು | 39 | 7.42 |
| 04. | ಇತರೆ ಅಕ್ರಮಗಳು | 24 | 1.88 |
| | **ಒಟ್ಟು** | **70** | **13.18** |
| | **ಮೋಟಾರು ವಾಹನಗಳ ಮೇಲಿನ ತೆರಿಗೆಗಳು** | | |
| 01. | ನಿರ್ಮಾಣ ಉಪಕರಣ ವಾಹನಗಳ ಮೇಲೆ ಜೀವಿತಾವಧಿ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 29 | 2.60 |
| 02. | ಸಾಗಣೆಯೇತರ ವಾಹನಗಳಿಗೆ ಸಂಬಂಧಿಸಿದಂತೆ ಜೀವಿತಾವಧಿ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 36 | 1.37 |
| 03. | ಇತರೆ ನಿಯಮಬಾಹಿರತೆಗಳು | 45 | 17.40 |
| | **ಒಟ್ಟು** | **110** | **21.37** |
| | **ವಿದ್ಯುಚ್ಛಕ್ತಿ ತೆರಿಗೆ** | | |
| 1 | ವಿದ್ಯುಚ್ಛಕ್ತಿ ತೆರಿಗೆಯನ್ನು ಪಾವತಿಸದಿದ್ದುದು/ತಗಾದೆ ಸೃಷ್ಟಿಸದಿದ್ದುದು | 02 | 0.27 |
| 2 | ವಿದ್ಯುಚ್ಛಕ್ತಿ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು/ಪಾವತಿಸಿದ್ದುದು | 03 | 0.09 |
| | **ಒಟ್ಟು** | **05** | **0.36** |
| | **ಖನಿಜ ಸ್ವೀಕೃತಿಗಳು** | | |
| 01. | ರಾಜಧನ/ನಿಷ್ಕ್ರಿಯ ಬಾಡಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 13 | 3.79 |
| 02. | ಪರಿಸರ ರಕ್ಷಣಾ ಶುಲ್ಕವನ್ನು ವಸೂಲಾತಿ ಮಾಡದಿದ್ದುದು/ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಿದ್ದುದು | 08 | 10.03 |
| 03. | ಖನಿಜ ರವಾನೆ ಪರವಾನಿಗೆಗಳನ್ನು ಪಡೆದುಕೊಳ್ಳದೆಯೇ ಖನಿಜಗಳನ್ನು ಸಾಗಣೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 08 | 99.12 |
| 04. | ಇತರೆ ನಿಯಮಬಾಹಿರತೆಗಳು | 15 | 18.44 |
| | **ಒಟ್ಟು** | **44** | **131.38** |
| | **ಒಟ್ಟು ಮೊತ್ತ** | **229** | **166.29** |

ಪ್ರಸಕ್ತ ಸಾಲಿನಲ್ಲಿ ಸಂಬಂಧಿತ ಇಲಾಖೆಗಳು, ಹಿಂದಿನ ಸಾಲುಗಳಲ್ಲಿ 109 ಪ್ರಕರಣಗಳಲ್ಲಿ ₹ 42.05 ಕೋಟಿ ಮೊತ್ತವು ಒಳಗೊಂಡಂತೆ ಸ್ಪಷ್ಟಪಡಿಸಲಾಗಿದ್ದ ಕಡಿಮೆ ಪ್ರಮಾಣದಲ್ಲಿ ಮಾಡಲಾಗಿದ್ದ ನಿರ್ಧಾರಣೆಗಳು ಹಾಗೂ ಮತ್ತಿತರ ಲೋಪದೋಷಗಳನ್ನು ಒಪ್ಪಿಕೊಂಡವು. 2013–14 ಸಾಲಿನಲ್ಲಿ 57 ಪ್ರಕರಣಗಳಲ್ಲಿ ₹ 10.67 ಕೋಟಿ

ಮೊತ್ತವನ್ನು ವಸೂಲಾತಿ ಮಾಡಲಾಯಿತು. ₹ 103.53 ಕೋಟಿ ಮೊತ್ತವು ಒಳಗೊಂಡಂತೆ ಕೆಲವು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

**ರಾಜ್ಯ ಅಬಕಾರಿ**

## 5.3 ಐಎಂಎಲ್ ಅನ್ನು ಕಡಿಮೆ ಪ್ರಮಾಣದಲ್ಲಿ ಸಾಗಣೆ ಮಾಡಿದ್ದು

ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳು) ನಿಯಮಗಳು, 1968ರ ನಿಯಮ 14(2)ರ ಪ್ರಕಾರ, ಸಿಎಲ್–2 ನಮೂನೆಯಲ್ಲಿ ಚಿಲ್ಲರೆ ಅಂಗಡಿ ಪರವಾನಿಗೆಗಳನ್ನು ಹಾಗೂ ನಮೂನೆ ಸಿಎಲ್–9ರಲ್ಲಿ ಬಾರು ಪರವಾನಿಗೆಗಳನ್ನು ಹೊಂದಿರುವ ಪರವಾನಿಗೆದಾರರು, ಅಂಗಡಿಗೆ ತಿಂಗಳು ಒಂದಕ್ಕೆ ನಿಗಧಿಯಾಗಿರುವ ಕನಿಷ್ಠ ಪರಿಮಾಣದ ಮದ್ಯವನ್ನು ಓರ್ವ ವಿತರಕ ಪರವಾನಿಗೆದಾರರ ಮಳಿಗೆಯಿಂದ ಸಾಗಣೆ ಮಾಡತಕ್ಕದ್ದು. ಕನಿಷ್ಠ ಪರಿಮಿತಿಯು ಪ್ರತಿಯೊಂದು ಮಾದರಿಯ ಪರವಾನಿಗೆಗೆ ನಿರ್ದಿಷ್ಟಪಡಿಸಲಾಗಿರುವ ಪರವಾನಿಗೆ ಶುಲ್ಕ, ಸಾಮಾನ್ಯ ನಿರ್ವಹಣೆಯ ವೆಚ್ಚಗಳು, ಭರಿಸಲಾಗುವ ಇತರೆ ವೆಚ್ಚಗಳು, ಅಂಗಡಿ ಇರುವ ಸ್ಥಳ, ಕಾರ್ಯಾಚರಣೆಯ ಪ್ರದೇಶ, ಹಿಂದಿನ ಸಾಲುಗಳಲ್ಲಿ ಮಾರಾಟವಾದ ಮದ್ಯದ ಪರಿಮಾಣ, ಇವುಗಳ ಮೇಲೆ ಆಧಾರಿತವಾಗಿರುತ್ತದೆ ಹಾಗೂ ಪರವಾನಿಗೆದಾರರು ಕಳ್ಳಬಟ್ಟಿ ಮದ್ಯವನ್ನು ಪಡೆದುಕೊಂಡಿಲ್ಲ ಹಾಗೂ ತಮ್ಮ ಅಂಗಡಿಯಲ್ಲಿ ಮಾರಾಟ ಮಾಡಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸದೃಷ ಅಂಶಗಳು ಹಾಗೂ ಮದ್ಯವನ್ನು ಕಡಿಮೆ ಪ್ರಮಾಣದಲ್ಲಿ ಮಾರಾಟ ಮಾಡಲು ಯಾವುದೇ ಪ್ರಯತ್ನಗಳನ್ನೂ ಮಾಡಿಲ್ಲ ಹಾಗೂ ಆರೋಗ್ಯಕರ ಮದ್ಯವನ್ನು ಅಧಿಕೃತ ಮೂಲಗಳಿಂದ ಪಡೆದುಕೊಳ್ಳಲಾಗಿದೆ ಹಾಗೂ ಗಿರಾಕಿಗಳಿಗೆ ಮಾರಾಟ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಆಗಿರುತ್ತದೆ. ಒಂದು ವೇಳೆ, ಪರವಾನಿಗೆದಾರರು ತಿಂಗಳು ಒಂದಕ್ಕೆ ನಿಗಧಿಗೊಳಿಸಲಾಗಿದ್ದ ಮದ್ಯದ ಕನಿಷ್ಠ ಪರಿಮಾಣವನ್ನು ಸಾಗಣೆ ಮಾಡುವಲ್ಲಿ ವಿಫಲರಾದಲ್ಲಿ, ಸಾಗಣೆಯಲ್ಲಿನ ಕೊರತೆ ಪರಿಮಾಣದ ಪ್ರತಿಯೊಂದು ದೊಡ್ಡಗಾತ್ರದ (ಬಲ್ಕ್) ಲೀಟರಿಗೆ ₹ 100 ದಂಡವನ್ನು ಪಾವತಿಸಲು ಬಾಧ್ಯರಾಗಿರುತ್ತಾರೆ.

ಬೆಂಗಳೂರು (ಪೂರ್ವ) ಮತ್ತು ಬೆಂಗಳೂರು (ಪಶ್ಚಿಮ)ದ ಅಬಕಾರಿ ಇಲಾಖೆಯ ಉಪ ಆಯುಕ್ತರುಗಳ ಅಧಿಕಾರವ್ಯಾಪ್ತಿಯಲ್ಲಿ ಬರುವ ಏಳು[1] ಅಬಕಾರಿ ತನಿಖಾಧಿಕಾರಿಗಳು ನಿರ್ವಹಿಸಿದ್ದ ಬಳಕೆ ವಹಿಗಳನ್ನು ಜನವರಿ 2014ರಲ್ಲಿ ಮಾಡಲಾದ ಪರೀಕ್ಷಾ ಪರಿಶೀಲನೆಯು 29 ಪರವಾನಿಗೆದಾರರು (ಸಿ.ಎಲ್.9) 2008–09ರಿಂದ 2012–13ರ ಅವಧಿಗಳಲ್ಲಿ 2,14,153 ದೊಡ್ಡಗಾತ್ರದ (ಬಲ್ಕ್) ಲೀಟರುಗಳಷ್ಟು ಐಎಂಎಲ್ ಅನ್ನು ಕಡಿಮೆ ಪ್ರಮಾಣದಲ್ಲಿ ಸಾಗಣೆ ಮಾಡಿದ್ದರು ಎಂಬುದನ್ನು ತೋರಿಸಿಕೊಟ್ಟಿತು. ಈ ಪರವಾನಿಗೆದಾರರು ಐಎಂಎಲ್ ಅನ್ನು ಸಾಗಣೆ ಮಾಡುವುದಕ್ಕಾಗಿ ನಿರ್ದಿಷ್ಟಪಡಿಸಲಾಗಿದ್ದ ಕನಿಷ್ಠ ಪರಿಮಿತಿಯನ್ನು ಉಲ್ಲಂಘಿಸಿದ್ದರಾದರೂ, ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತೆ ಐಎಂಎಲ್ ಅನ್ನು ಕಡಿಮೆ ಪ್ರಮಾಣದಲ್ಲಿ ಸಾಗಣೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸಲು ಇಲಾಖೆಯು ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ವಿಧಿಸದೇ ಇದ್ದಂತಹ ದಂಡದ ಮೊತ್ತವು ₹ 2.14 ಕೋಟಿ ಆಗಿದ್ದಿತು.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ಸಂಬಂಧಿತ ಅಬಕಾರಿ ತನಿಖಾಧಿಕಾರಿಗಳಿಗೆ ಸ್ಪಷ್ಟಪಡಿಸಿದನಂತರ, ತಮ್ಮ ಅಧಿಕಾರವ್ಯಾಪ್ತಿಯಲ್ಲಿ ಬರುವ ಆರು ಪರವಾನಿಗೆದಾರರಿಗೆ ನೋಟೀಸುಗಳನ್ನು ನೀಡುವುದಾಗಿ ವೈಟ್‌ಫೀಲ್ಡ್ ಮತ್ತು ಕೆ.ಆರ್. ಪುರಂನ ಅಬಕಾರಿ ತನಿಖಾಧಿಕಾರಿಗಳು ತಿಳಿಸಿದರು (ಜನವರಿ 2014). ಐದು ಅಬಕಾರಿ ತನಿಖಾಧಿಕಾರಿಗಳ ಅಧಿಕಾರವ್ಯಾಪ್ತಿಯಲ್ಲಿ ಬರುವ ಉಳಿದ 23 ಪರವಾನಿಗೆದಾರರಿಗೆ ಸಂಬಂಧಿಸಿದಂತೆ ವಿಷಯವು ಪರಿಶೀಲನೆಯ ಅಡಿಯಲ್ಲಿದೆ ಎಂಬುದಾಗಿ ತಿಳಿಸಲಾಗಿದ್ದಿತು.

ವಿಷಯವನ್ನು ಅನುಕ್ರಮವಾಗಿ ಮಾರ್ಚ್ 2014ರಲ್ಲಿ ಮತ್ತು ಜೂನ್ 2014ರಲ್ಲಿ ಇಲಾಖೆಗೆ ಸ್ಪಷ್ಟಪಡಿಸಲಾಯಿತು ಹಾಗೂ ಸರ್ಕಾರಕ್ಕೆ ತಿಳಿಸಲಾಯಿತು. ಅವುಗಳ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).

[1] ಅಬಕಾರಿ ತನಿಖಾಧಿಕಾರಿಗಳು, ಬನಶಂಕರಿ, ಗಾಂಧಿನಗರ, ಕೆ.ಆರ್. ಪುರಂ, ಮುನಿರೆಡ್ಡಿ ಪಾಳ್ಯ, ರಾಜಾಮಹಲ್ ವಿಲಾಸ್, ಆರ್‌ಪಿಸಿ ಬಡಾವಣೆ ಹಾಗೂ ವೈಟ್‌ಫೀಲ್ಡ್.

## ಮೋಟಾರು ವಾಹನಗಳ ಮೇಲಿನ ತೆರಿಗೆಗಳು

### 5.4 ನಿರ್ಮಾಣ ಉಪಕರಣ ವಾಹನಗಳ ಮೇಲೆ ಜೀವಿತಾವಧಿ ತೆರಿಗೆಯನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ 1957ರ ಪ್ರಕಾರ, ನಿರ್ಮಾಣ ಉಪಕರಣ ವಾಹನಗಳ ಮೇಲೆ 31 ಮಾರ್ಚ್ 2010ರವರೆಗೂ ತ್ರೈಮಾಸಿಕ ತೆರಿಗೆಯನ್ನು ಪಾವತಿಸಬೇಕಿದ್ದಿತು. 1 ಏಪ್ರಿಲ್ 2010ರಿಂದ ಜಾರಿಗೆ ಬರುವಂತೆ, ಈ ವಾಹನಗಳು ಅವುಗಳ ಮೌಲ್ಯದ ಶೇಕಡಾ 6ರ ದರದಲ್ಲಿ ಜೀವಿತಾವಧಿ ತೆರಿಗೆ ಪಾವತಿಗೆ ಬಾಧ್ಯವಾಗಿವೆ. ಮುಂದುವರೆದು, 1 ಏಪ್ರಿಲ್ 2010ರಿಂದ ಜಾರಿಗೆ ಬರುವಂತೆ ಶೇಕಡಾ 10ರ ದರದಲ್ಲಿ ಹಾಗೂ 1 ಏಪ್ರಿಲ್ 2011ರಿಂದ ಜಾರಿಗೆ ಬರುವಂತೆ ವಿಧಿಸಲಾದ ತೆರಿಗೆಯ ಶೇಕಡಾ 11ರ ದರದಲ್ಲಿ ಸೆಸ್ ಕೂಡ ಅನ್ವಯಗೊಳ್ಳುತ್ತದೆ. ಜೀವಿತಾವಧಿ ತೆರಿಗೆಯನ್ನು ಎರಡು ಕಂತುಗಳಲ್ಲಿ ಪಾವತಿಸಲು ಅನುಮತಿ ನೀಡಲಾಗಿದ್ದಿತು, ತೆರಿಗೆ ಪಾವತಿಯು ಬಾಕಿ ಇದ್ದಂತಹ ಸಮಯದಲ್ಲಿ ಅಥವಾ ನೋಂದಣಿಯ ಸಮಯದಲ್ಲಿ ಅರ್ಧ ಮೊತ್ತ ಹಾಗೂ ತೆರಿಗೆಯ ಉಳಿದ ಮೊತ್ತವನ್ನು ಮೊದಲ ಕಂತನ್ನು ಪಾವತಿಸಿದ ದಿನಾಂಕದ ನಂತರ ಆರು ತಿಂಗಳುಗಳ ಒಳಗೆ ಪಾವತಿಸತಕ್ಕದ್ದು. ತೆರಿಗೆಯನ್ನು ಪಾವತಿಸದಿರುವುದು ಒಂದು ಕಾನೂನುಬಾಹಿರ ಕ್ರಮವಾಗುತ್ತದೆ ಹಾಗೂ ಪಾವತಿಸಬೇಕಾದ ತೆರಿಗೆ ಮೊತ್ತದ ಪಾವತಿಯಲ್ಲಿ ತಪ್ಪಿತಸ್ಥರಾದ ಪ್ರತೀ ತಿಂಗಳಿಗೂ ಪಾವತಿಸಬೇಕಾದ ತೆರಿಗೆ ಮೊತ್ತದ ಶೇಕಡಾ 1ರಷ್ಟು ಮೊತ್ತವನ್ನು ದಂಡದ ರೂಪದಲ್ಲಿ ಪಾವತಿಸಲು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮಗಳು 1957 ಅನುವು ಮಾಡಿದೆ.

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ ಪ್ರಕಾರ, ಜೀವಿತಾವಧಿ ತೆರಿಗೆಯ ಉದ್ದೇಶಕ್ಕಾಗಿ ಆಮದು ಮಾಡಿಕೊಳ್ಳಲಾದ ವಾಹನದ ಮೌಲ್ಯವು **"**ಆಮದು ಸುಂಕ, ಸಾಗಾಣಿಕೆ ವೆಚ್ಚ ಹಾಗೂ ವಿಧಿಸಲಾಗಿರುವ ಇತರೆ ತೆರಿಗೆಗಳ ಜೊತೆಗೆ ಆಮದು ಅಧಿನಿಯಮದ ಅಡಿಯಲ್ಲಿ ಪ್ರವೇಶದ ಬಿಲ್ಲಿನಲ್ಲಿ ನಮೂದಿಸಲಾಗಿರುವ ಮೌಲ್ಯ**"**.

17[2] ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ **"**ಬಿ**"**[3] ವಹಿಗಳು ಹಾಗೂ ನೋಂದಣಿ ಕಡತಗಳನ್ನು ಏಪ್ರಿಲ್ 2013 ಹಾಗೂ ಫೆಬ್ರವರಿ 2014ರ ನಡುವಿನ ಅವಧಿಯಲ್ಲಿ ಮಾಡಲಾದ ಪರೀಕ್ಷಾ ಪರಿಶೀಲನೆಯ ವೇಳೆಯಲ್ಲಿ 148 ನಿರ್ಮಾಣ ಉಪಕರಣ ವಾಹನಗಳಿಗೆ ಸಂಬಂಧಿಸಿದಂತೆ ₹ 1.13 ಕೋಟಿ ಮೊತ್ತದ ಜೀವಿತಾವಧಿ ತೆರಿಗೆಯನ್ನು ವಿಧಿಸಿರಲಿಲ್ಲ ಅಥವಾ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು ಎಂಬುದನ್ನು ನಾವು ಗಮನಿಸಿದೆವು. ಈ ಪ್ರಕರಣಗಳಲ್ಲಿ ₹ 15.75 ಲಕ್ಷ ಮೊತ್ತದಷ್ಟು ದಂಡವನ್ನೂ ವಿಧಿಸಬೇಕಿದ್ದಿತು. ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

- 23 ವಾಹನಗಳಿಗೆ ಸಂಬಂಧಿಸಿದಂತೆ, ವಾಹನದ ಮಾಲೀಕರು ₹ 28.25 ಲಕ್ಷ ಮೊತ್ತದಷ್ಟು ಜೀವಿತಾವಧಿ ತೆರಿಗೆಯ ಮೊದಲ ಕಂತನ್ನೂ ಸಹ ಪಾವತಿಸಿರಲಿಲ್ಲ.
- 122 ವಾಹನಗಳಿಗೆ ಸಂಬಂಧಿಸಿದಂತೆ, ಅಕ್ಟೋಬರ್ 2010 ಹಾಗೂ ಸೆಪ್ಟಂಬರ್ 2012ರ ನಡುವಿನ ಅವಧಿಯಲ್ಲಿ ಮೊದಲ ಕಂತನ್ನು ಪಾವತಿಸಿದ್ದ ವಾಹನ ಮಾಲೀಕರು ಮೊದಲ ಕಂತನ್ನು ಪಾವತಿಸಿದ ದಿನಾಂಕದಿಂದ ಆರು ತಿಂಗಳುಗಳಿಗೂ ಹೆಚ್ಚು ಕಾಲ ಕಳೆದಿದ್ದರೂ ಎರಡನೆಯ ಕಂತನ್ನು ಪಾವತಿಸುವಲ್ಲಿ ತಪ್ಪಿತಸ್ಥರಾಗಿದ್ದರು (ಏಪ್ರಿಲ್ 2013). ಈ ಪ್ರಕರಣಗಳಲ್ಲಿ ತೆರಿಗೆಯ ಎರಡನೆಯ ಕಂತಿನ ಒಟ್ಟು ಮೊತ್ತವು ₹ 83.63 ಲಕ್ಷ ಆಗಿದ್ದಿತು. 31 ಮಾರ್ಚ್ 2013ರಲ್ಲಿದ್ದಂತೆ, ಪಾವತಿಸದೇ ಇದ್ದಂತಹ ಎರಡನೆಯ ಕಂತಿನ ಬಾಕಿಗಳ ತಿಂಗಳುವಾರು ವಿಳಂಬವನ್ನು **ಕೋಷ್ಟಕ 5.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 5.2**

| ಪಾವತಿಗಾಗಿ ಅರ್ಹವಿದ್ದ ಸಮಯದ ನಂತರ ಸಂಭವಿಸಿದ್ದ ವಿಳಂಬದ ಅವಧಿ | ವಾಹನಗಳ ಸಂಖ್ಯೆ | ತೆರಿಗೆಯ ಮೊತ್ತ (₹ ಲಕ್ಷದಲ್ಲಿ) |
|---|---|---|
| 1ರಿಂದ 6 ತಿಂಗಳುಗಳು | 72 | 50.46 |
| 6 ತಿಂಗಳುಗಳಿಗೂ ಹೆಚ್ಚು ಹಾಗೂ 12 ತಿಂಗಳುಗಳವರೆಗೆ | 25 | 16.02 |
| 12 ತಿಂಗಳುಗಳಿಗೂ ಹೆಚ್ಚು ಹಾಗೂ 18 ತಿಂಗಳುಗಳವರೆಗೆ | 11 | 8.13 |
| 18 ತಿಂಗಳುಗಳವರೆಗೆ | 14 | 9.02 |
| **ಒಟ್ಟು** | **122** | **83.63** |

---

[2] ಪ್ರಾದೇಶಿಕ ಸಾರಿಗೆ ಕಚೇರಿಗಳು–ಬಾಗಲಕೋಟೆ, ಬೆಳಗಾವಿ, ಬಿದರೆ, ಚಾಮರಾಜನಗರ, ಚಿತ್ರದುರ್ಗ, ಹೊಸಪೇಟೆ, ಜಮಖಂಡಿ, ಜ್ಞಾನಭಾರತಿ, ಕಾರವಾರ, ಮಂಡ್ಯ, ಮೈಸೂರು (ಪೂರ್ವ), ಮೈಸೂರು(ಪಶ್ಚಿಮ), ನಾಗಮಂಗಲ, ರಾಯಚೂರು, ತುಮಕೂರು, ಯಾದಗಿರಿ, ಯಶವಂತಪುರ

[3] ವಹಿಯು, ನೋಂದಾಯಿತ ವಾಹನಗಳಿಗಾಗಿ ಪಾವತಿಸಲಾದ ತೆರಿಗೆಯ ದಿನವಾರು ವಿವರಗಳನ್ನು ಒಳಗೊಂಡಿರುತ್ತದೆ.

ಅದನ್ನು ವಸೂಲಾತಿ ಮಾಡಲು ಸಂಬಂಧಿತ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.

- ಮೂರು ಆಮದು ಮಾಡಿಕೊಳ್ಳಲಾಗಿದ್ದ ನಿರ್ಮಾಣ ಉಪಕರಣ ವಾಹನಗಳಿಗೆ ಸಂಬಂಧಿಸಿದಂತೆ, ಜೀವಿತಾವಧಿ ತೆರಿಗೆಯನ್ನು ವಿಧಿಸುವ ಸಲುವಾಗಿ, ಪ್ರವೇಶದ ಬಿಲ್ಲುಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದ ₹ 174.88 ಲಕ್ಷ ವಾಸ್ತವಿಕ ಮೌಲ್ಯಕ್ಕೆ ಪ್ರತಿಯಾಗಿ ₹ 141.15 ಲಕ್ಷ ಮೊತ್ತವನ್ನು ತೆಗೆದುಕೊಳ್ಳಲಾಗಿದ್ದಿತು. ಇದು ₹ 1.54 ಲಕ್ಷ[4] ಮೊತ್ತದಷ್ಟು ಜೀವಿತಾವಧಿ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿತು.

ಈ ಪ್ರಕರಣಗಳನ್ನು ಸಂಬಂಧಿತ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಏಪ್ರಿಲ್ 2013 ಹಾಗೂ ಫೆಬ್ರವರಿ 2014ರ ನಡುವಿನ ಅವಧಿಯಲ್ಲಿ ಸ್ಪಷ್ಟಪಡಿಸಲಾಯಿತು ಹಾಗೂ ಸಾರಿಗೆ ಮತ್ತು ರಸ್ತೆ ಸುರಕ್ಷತೆಯ ಆಯುಕ್ತರವರ ಗಮನಕ್ಕೆ ತರಲಾಯಿತು (ಫೆಬ್ರವರಿ ಹಾಗೂ ಮೇ 2014). 40 ಪ್ರಕರಣಗಳಲ್ಲಿ ದಂಡವೂ ಒಳಗೊಂಡಂತೆ ₹ 34.26 ಲಕ್ಷ ಮೊತ್ತವನ್ನು ವಸೂಲಾತಿ ಮಾಡಿರುವುದಾಗಿಯೂ 15 ಪ್ರಕರಣಗಳಲ್ಲಿ ತಗಾದೆ ನೋಟೀಸುಗಳನ್ನು ನೀಡಿರುವುದಾಗಿಯೂ ಸರ್ಕಾರ/ಇಲಾಖೆಯು ತಿಳಿಸಿತು. ಉಳಿದ 93 ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರಗಳನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).

## 5.5 ಸಾರಿಗೆಯೇತರ ವಾಹನಗಳ ಮೇಲೆ ಜೀವಿತಾವಧಿ ತೆರಿಗೆಯನ್ನು ವಿಧಿಸದಿದ್ದುದು

ಕೇಂದ್ರ ಸರ್ಕಾರಿ ನೌಕರರು, ರಕ್ಷಣಾ ಇಲಾಖೆಯ ಸಿಬ್ಬಂದಿ, ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳೂ ಸೇರಿದಂತೆ ಸಾರ್ವಜನಿಕ ವಲಯ ಉದ್ದಿಮೆಗಳ ಉದ್ಯೋಗಿಗಳ ಒಡೆತನದಲ್ಲಿರುವ ಕಾರುಗಳು ಮತ್ತು ಜೀಪುಗಳ ಮೇಲಿನ ತೆರಿಗೆಯನ್ನು ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮದ ಷೆಡ್ಯೂಲುಗಳ ಭಾಗ ಎ[5] ಪ್ರಕಾರ ತ್ರೈಮಾಸಿಕ ಆಧಾರದ ಮೇರೆಗೆ ವಿಧಿಸಲಾಗುತ್ತಿದ್ದಿತು (28 ಡಿಸೆಂಬರ್ 2011ರವರೆಗೆ). 29 ಡಿಸೆಂಬರ್ 2011ರಿಂದ ಜಾರಿಗೆ ಬರುವಂತೆ, ಕರ್ನಾಟಕ ರಾಜ್ಯದಲ್ಲಿರುವ ಈ ವ್ಯಕ್ತಿಗಳು ಖರೀದಿಸಿದ ಮೋಟಾರು ಕಾರುಗಳು ಮತ್ತು ಜೀಪುಗಳ ಮೇಲೆ ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮದ ಷೆಡ್ಯೂಲಿನ ಭಾಗ ಎ5 ಪ್ರಕಾರ ಜಿವಾವಧಿ ತೆರಿಗೆ[6] ವಿಧಿಸಲಾಗುತ್ತಿದ್ದಿತು.

ತೆರಿಗೆಯನ್ನು ಪಾವತಿಸದಿರುವುದು ಒಂದು ಕಾನೂನುಬಾಹಿರ ಕ್ರಮವಾಗುತ್ತದೆ ಹಾಗೂ ಕರ್ನಾಟಕ ಮೋಟಾರು ವಾಹನ ತೆರಿಗೆ ನಿಯಮಗಳು 1957, ತಪ್ಪಿತಸ್ತರಾಗಿದ್ದ ಪ್ರತಿಯೊಂದು ತಿಂಗಳಿಗೂ ಪಾವತಿಸಬೇಕಾದ ತೆರಿಗೆಯ ಶೇಕಡಾ 1ರ ದರದಲ್ಲಿ ದಂಡದ ರೂಪದಲ್ಲಿ ಪಾವತಿಸಲು ಅನುವು ಮಾಡಿದೆ.

ಜೂನ್ 2013 ಹಾಗೂ ನವಂಬರ್ 2013ರ ನಡುವಿನ ಅವಧಿಯಲ್ಲಿ ಆರು[7] ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಮಾಡಲಾದ ದಾಖಲೆಗಳ ಪರೀಕ್ಷಾ ಪರಿಶೀಲನೆಯು, ಈ ಉದ್ಯೋಗಿಗಳು ರಾಜ್ಯದಲ್ಲಿ ಖರೀದಿಸಿದ 50 ವಾಹನಗಳಿಗೆ ಸಂಬಂಧಿಸಿದಂತೆ ₹ 29.80 ಲಕ್ಷ ಮೊತ್ತದಷ್ಟು ಬಾಕಿಯಿದ್ದಂತಹ ಜೀವಿತಾವಧಿ ತೆರಿಗೆಯನ್ನು ಪಾವತಿಸಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ತಗಾದೆಯನ್ನು ಸೃಷ್ಟಿಸಲು ಹಾಗೂ ಬಾಕಿ ಇರುವ ತೆರಿಗೆಗಳನ್ನು ವಸೂಲಾತಿ ಮಾಡಲು ಇಲಾಖೆಯು ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ. ಈ ಪ್ರಕರಣಗಳಲ್ಲಿ ₹ 3.92 ಲಕ್ಷ ಮೊತ್ತದಷ್ಟು ದಂಡವನ್ನು[8] ವಿಧಿಸುವ ಅಗತ್ಯವಿದ್ದಿತು.

ಇದನ್ನು ಗಮನಕ್ಕೆ ತಂದನಂತರ, ಚಾಮರಾಜನಗರ, ಮೈಸೂರು (ಪಶ್ಚಿಮ), ಬಿದರೆ ಹಾಗೂ ಕಾರವಾರದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಗಾದೆ ನೋಟೀಸುಗಳನ್ನು ನೀಡಲಾಗಿದೆ ಹಾಗೂ ಪ್ರಕರಣಗಳನ್ನು ತಗಾದೆ, ವಸೂಲಾತಿ ಮತ್ತು ಬಾಕಿ (ಡಿಸಿಬಿ) ತ:ಖ್ತೆಗೆ ತೆಗೆದುಕೊಳ್ಳಲಾಗುವುದು ಎಂಬುದಾಗಿ ಉತ್ತರಿಸಿದರು. ಬೆಂಗಳೂರು (ಪಶ್ಚಿಮ) ಹಾಗೂ ದಾವಣಗೆರೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಗಾದೆ ನೋಟೀಸುಗಳನ್ನು ಈಗಾಗಲೇ ನೀಡಲಾಗಿದೆ ಎಂಬುದಾಗಿ ಉತ್ತರಿಸಿದರು. ಆದಾಗ್ಯೂ, ತಗಾದೆ ನೋಟೀಸುಗಳನ್ನು ನೀಡಿದ್ದಕ್ಕೆ ಯಾವುದೇ ದಾಖಲೆಗಳನ್ನೂ ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ಒದಗಿಸಲಿಲ್ಲ.

---

4 ವಿಧಿಸಬೇಕಾಗಿದ್ದ ಜೀವಿತಾವಧಿ ತೆರಿಗೆ ₹ 11.64 ಲಕ್ಷ, ಇದರಿಂದ ವಿಧಿಸಲಾಗಿದ್ದ ₹ 10.10 ಲಕ್ಷ ಮೊತ್ತವನ್ನು ಕಳೆಯುವುದು.

5 ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮದ ಷೆಡ್ಯೂಲುಗಳ ಭಾಗ ಎ – ವಾಹನಗಳ ಮೇಲೆ ತ್ರೈಮಾಸಿಕ ತೆರಿಗೆಯನ್ನು ವಿಧಿಸುವುದರ ಬಗ್ಗೆ ನಿರ್ದಿಷ್ಟಪಡಿಸಿದೆ.

6 1.4.2010ರ ತೆರಿಗೆಯ ಮೇಲೆ ಶೇಕಡಾ 10 ಮತ್ತು 1.4.2011ರಿಂದ ಶೇಕಡಾ 11ರಷ್ಟು ಸೆಸ್‌ವಿಧಿಸುವುದು ಸಹ ಅನ್ವಯಿಸಲ್ಪಡುತ್ತದೆ.

7 ಪ್ರಾದೇಶಿಕ ಸಾರಿಗೆ ಕಚೇರಿ–ಬೆಂಗಳೂರು (ಪೂರ್ವ), ಬಿದರೆ, ಚಾಮರಾಜನಗರ, ದಾವಣಗೆರೆ, ಕಾರವಾರ ಮತ್ತು ಮೈಸೂರು

8 ಮಾರ್ಚ್ 2013ರವರೆಗೆ ಲೆಕ್ಕಹಾಕಲಾಗಿದೆ.

ಇದನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತೆಗಾಗಿನ (ಆಯುಕ್ತರು) ಆಯುಕ್ತರ ಗಮನಕ್ಕೆ ಜೂನ್ 2013 ಹಾಗೂ ಡಿಸೆಂಬರ್ 2013ರ ನಡುವೆ ಹಾಗೂ ಅಲ್ಲದೇ ಪುನ: ಡಿಸೆಂಬರ್ 2013ರಲ್ಲಿ ತರಲಾಯಿತು. 16 ಪ್ರಕರಣಗಳಲ್ಲಿ ₹ 12.66 ಲಕ್ಷ ಮೊತ್ತದಷ್ಟು ತೆರಿಗೆಗಳನ್ನು ಮತ್ತು ದಂಡವನ್ನು ವಸೂಲಾತಿ ಮಾಡಿರುವುದಾಗಿ ಹಾಗೂ ಎಂಟು ಪ್ರಕರಣಗಳಲ್ಲಿ ತಗಾದೆ ನೋಟೀಸುಗಳನ್ನು ನೀಡಿರುವುದಾಗಿ ಆಯುಕ್ತರವರ ಕಚೇರಿಯು ವರದಿ ಮಾಡಿದ್ದು ಅದನ್ನು ಸರ್ಕಾರವು ಸಹ ಅನುಮೋದಿಸಿತು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).

**ಖನಿಜಗಳಿಂದ ಸ್ವೀಕೃತಿಗಳು**

## 5.6 ಖನಿಜ ರವಾನೆ ಪರವಾನಿಗೆಗಳನ್ನು ಪಡೆದುಕೊಳ್ಳದೆಯೇ ಅಪ್ರಧಾನ ಖನಿಜಗಳನ್ನು ಸಾಗಣೆ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕರು ಅಥವಾ ಹಿರಿಯ ಭೂವಿಜ್ಞಾನಿಯವರು ನೀಡಲ್ಪಡುವ ಒಂದು ಖನಿಜ ರವಾನೆ ಪರವಾನಿಗೆಯ ಅಡಿಯಲ್ಲಿ ಅಥವಾ ಅದರ ಪ್ರಕಾರವಲ್ಲದೇ ಮತ್ಯಾವ ರೀತಿಯಲ್ಲಿಯೂ ಯಾವುದೇ ವ್ಯಕ್ತಿಯೂ ಯಾವುದೇ ಅಪ್ರಧಾನ ಖನಿಜಗಳನ್ನೂ ಸಾಗಾಣಿಕೆ ಮಾಡುವಂತಿಲ್ಲ ಅಥವಾ ಸಾಗಾಣಿಕೆ ಮಾಡಲು ಕಾರಣವಾಗುವಂತಿಲ್ಲ ಎಂಬುದಾಗಿ ಕರ್ನಾಟಕ ಅಪ್ರಧಾನ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 42 ಚಿಂತಿಸಿದೆ.

ಮುಂದುವರೆದು, ಕಲ್ಲುಗಣಿ ಗುತ್ತಿಗೆ ಕರಾರುಪತ್ರದ ಷರತ್ತು–4ರ ಭಾಗ-Vರ ಪ್ರಕಾರ, ಕಲ್ಲುಗಣಿ ಗುತ್ತಿಗೆ ಪರವಾನಿಗೆಯನ್ನು ಹೊಂದಿರುವವರು ಖನಿಜ ರವಾನೆ ಪರವಾನಿಗೆಯನ್ನು ಪಡೆಯದ ಹೊರತು ಅಪ್ರಧಾನ ಖನಿಜಗಳನ್ನು ಸಾಗಾಣೆ ಮಾಡಿದ್ದಕ್ಕಾಗಿ ರಾಜಧನದ ಐದು ಪಟ್ಟು ದರದಲ್ಲಿ ದಂಡವನ್ನು ಪಾವತಿಸಲು ಬಾಧ್ಯರಿರುತ್ತಾರೆ.

ನಾಲ್ಕು[9] ಉಪ–ನಿರ್ದೇಶಕರುಗಳು ಹಾಗೂ ಎರಡು[10] ಹಿರಿಯ ಭೂವಿಜ್ಞಾನಿಗಳ ಕಚೇರಿಗಳಲ್ಲಿ ನವಂಬರ್ 2013 ಹಾಗೂ ಫೆಬ್ರವರಿ 2014ರ ನಡುವೆ ದಾಖಲೆಗಳನ್ನು ಪರೀಕ್ಷಾ ಪರಿಶೀಲನೆ ಮಾಡುವ ವೇಳೆಯಲ್ಲಿ, 2011–12 ಹಾಗೂ 2012–13 ಸಾಲುಗಳಲ್ಲಿ ಗುತ್ತಿಗೆದಾರರು 83.37 ಲಕ್ಷ ಮೆಟ್ರಿಕ್ ಟನ್ನುಗಳಷ್ಟು ಕಟ್ಟಡ ಕಲ್ಲುಗಳು ಹಾಗೂ 20,698 ಮೆಟ್ರಿಕ್ ಟನ್ನುಗಳಷ್ಟು ಸುಣ್ಣದ ಚಿಪ್ಪನ್ನು (ಲೈಮ್ ಶೆಲ್) ಸಾಗಣೆ ಮಾಡಿದ್ದರು ಎಂಬುದನ್ನು ನಾವು ಗಮನಿಸಿದೆವು. ಇದರ ಪೈಕಿ, ಕೇವಲ 17.15 ಲಕ್ಷ ಮೆಟ್ರಿಕ್ ಟನ್ನುಗಳಷ್ಟು ಕಟ್ಟಡ ಕಲ್ಲು ಹಾಗೂ 14,950 ಮೆಟ್ರಿಕ್ ಟನ್ನುಗಳಷ್ಟು ಸುಣ್ಣದ ಚಿಪ್ಪನ್ನು (ಲೈಮ್ ಶೆಲ್) ಖನಿಜ ರವಾನೆ ಪರವಾನಿಗೆಗಳನ್ನು ಪಡೆದನಂತರ ಸಾಗಾಣಿಕೆ ಮಾಡಲಾಗಿದ್ದಿತು ಹಾಗೂ ಉಳಿದ 66.22 ಲಕ್ಷ ಮೆಟ್ರಿಕ್ ಟನ್ನುಗಳಷ್ಟು ಕಟ್ಟಡ ಕಲ್ಲು ಹಾಗೂ 5,748 ಮೆಟ್ರಿಕ್ ಟನ್ನುಗಳಷ್ಟು ಸುಣ್ಣದ ಚಿಪ್ಪನ್ನು (ಲೈಮ್ ಶೆಲ್) ಖನಿಜ ರವಾನೆ ಪರವಾನಿಗೆಗಳನ್ನು ಪಡೆಯದೆಯೇ ಸಾಗಾಣಿಕೆ ಮಾಡಲಾಗಿದ್ದಿತು.

ಕಟ್ಟಡ ಕಲ್ಲು ಹಾಗೂ ಸುಣ್ಣದ ಚಿಪ್ಪನ್ನು (ಲೈಮ್ ಶೆಲ್) ಖನಿಜ ರವಾನೆ ಪರವಾನಿಗೆಗಳನ್ನು ಪಡೆಯದೆಯೇ ಸಾಗಾಣಿಕೆ ಮಾಡಿದ್ದಕ್ಕಾಗಿ ಕಲ್ಲುಗಣಿ ಗುತ್ತಿಗೆ ಕರಾರುಪತ್ರದ ಷರತ್ತುಗಳ ಪ್ರಕಾರ ಸಂಬಂಧಿತ ಕಚೇರಿಗಳು ದಂಡವನ್ನು ವಿಧಿಸಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು. ವಿಧಿಸದೇ ಇದ್ದಂತಹ ದಂಡದ ಮೊತ್ತವು ₹ 99.51 ಕೋಟಿ ಆಗುತ್ತದೆ.

ನಾವು ಇದನ್ನು ಸ್ಪಷ್ಟಪಡಿಸಲಾಗಿ (ನವಂಬರ್ 2013 ಮತ್ತು ಫೆಬ್ರವರಿ 2014), ಕರ್ನಾಟಕ ಅಪ್ರಧಾನ ಖನಿಜಗಳ ನಿಯಮಗಳು, 1994ರ ನಿಯಮ 42 ಮೇಲೆ ತಿಳಿಸಲಾದ ನಿಯಮಗಳ ನಿಯಮ 31ರ ಕಾರಣದಿಂದ ನಿಯಮ 42 ನಿರ್ದಿಷ್ಟಪಡಿಸಿರದ ಅಪ್ರಧಾನ ಖನಿಜಗಳಿಗೆ ಸಂಬಂಧಿಸಿದಂತೆ ಅನ್ವಯಗೊಳ್ಳುವುದಿಲ್ಲ, ಅದು ಈ ರೀತಿ ಅರ್ಥೈಸುತ್ತದೆ– ನಿಯಮಗಳು 6, 7, 8, 19 (19ಎ, 20) ಹಾಗೂ ನಿಯಮಗಳು 35ರಿಂದ 41 ನಿರ್ದಿಷ್ಟಪಡಿಸಿರದ ಅಪ್ರಧಾನ ಖನಿಜಗಳಿಗೆ ಗಣಿಗಾರಿಕೆ ಗುತ್ತಿಗೆಗೆ ಸಂಬಂಧಿತ ಅಧ್ಯಾಯ IVರ ಅಡಿಯಲ್ಲಿ ನೀಡಲಾದ ಗಣಿಗಾರಿಕೆ ಗುತ್ತಿಗೆಗಳಿಗೂ ಯಥಾವತ್ತಾಗಿ ಅನ್ವಯಿಸುತ್ತದೆ ಎಂಬುದಾಗಿ ಬೆಳಗಾವಿಯ ಉಪನಿರ್ದೇಶಕರು ಹಾಗೂ ಬಿದರೆಯ ಹಿರಿಯ ಭೂವಿಜ್ಞಾನಿಯವರು ತಿಳಿಸಿದರು. ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು, 1994ರ ನಿಯಮ 31 ಕಲ್ಲುಗಣಿಗಾರಿಕೆ ಗುತ್ತಿಗೆಗಳನ್ನು ನೀಡುವುದನ್ನು ಉಲ್ಲೇಖಿಸುತ್ತದೆಯಾದ್ದರಿಂದ ಹಾಗೂ ಈ ನಿಯಮಗಳ ಅಡಿಯಲ್ಲಿ ಅಧಿಕೃತ ಅಧಿಕಾರಿಯವರಿಂದ ನೀಡಲಾಗುವ ಖನಿಜ ರವಾನೆ ಪರವಾನಿಗೆಯ ಅನುಗುಣವಾಗಿ ಹೊರತು ಯಾವುದೇ ಅಪ್ರಧಾನ ಖನಿಜವನ್ನೂ ಸಾಗಣಿಕೆ ಮಾಡುವಂತಿಲ್ಲ ಎಂಬುದಾಗಿ ಸ್ಪಷ್ಟವಾಗಿ ತಿಳಿಸುವ ನಿಯಮ 42 ಎಲ್ಲಾ ಅಪ್ರಧಾನ ಖನಿಜಗಳಿಗೆ

---

9 ಬೆಳಗಾವಿ, ಮಂಗಳೂರು, ಕಾರವಾರ, ರಾಮನಗರ

10 ಬಿದರೆ, ಉಡುಪಿ.

ಅನ್ವಯಿಸುತ್ತದೆಯಾದ್ದರಿಂದ ಉತ್ತರವು ಸಮರ್ಥನೀಯವಾಗಿರಲಿಲ್ಲ. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಪ್ರಕರಣಗಳನ್ನು ಪರಿಶೀಲಿಸಲಾಗುವುದು ಎಂಬುದಾಗಿ ತಿಳಿಸಲ್ಪಟ್ಟಿದೆ.

ಇದನ್ನು ಡಿಸೆಂಬರ್ 2013ರಲ್ಲಿ ಮತ್ತು ಏಪ್ರಿಲ್ 2014ರಲ್ಲಿ ಇಲಾಖೆಯ ಗಮನಕ್ಕೆ ತರಲಾಯಿತು ಹಾಗೂ ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು. ಅವುಗಳ ಉತ್ತರಗಳನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).

## 5.7 ರಾಜಧನದ ದರಗಳನ್ನು ತಪ್ಪಾಗಿ ಅಳವಡಿಸಿಕೊಂಡ ಕಾರಣ ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ಕಡಿದುಕೊಂಡಿದ್ದು

ಕರ್ನಾಟಕ ಅಪ್ರಧಾನ ಖನಿಜಗಳ ರಿಯಾಯಿತಿ ನಿಯಮಗಳು, 1994ರ ನಿಯಮ 36ರ ಪ್ರಕಾರ, ಕಲ್ಲುಗಣಿಗಾರಿಕೆಯ ಗುತ್ತಿಗೆ ಅಥವಾ ಪರವಾನಿಗೆಯನ್ನು ಹೊಂದಿರುವವರು, ಗುತ್ತಿಗೆ/ಪರವಾನಿಗೆ ಹೊಂದಿರುವವರು ಅಥವಾ ಅವರ ಪ್ರತಿನಿಧಿ, ವ್ಯವಸ್ಥಾಪಕರು, ಉದ್ಯೋಗಿ ಅಥವಾ ಗುತ್ತಿಗೆದಾರರು ಸಾಗಣೆ ಮಾಡಿದ ಅಥವಾ ಬಳಸಲಾದ ಅಪ್ರಧಾನ ಖನಿಜಗಳ ಮೇಲೆ ನಿಯಮಗಳ ಅಡಿಯಲ್ಲಿನ ಷೆಡ್ಯೂಲು-IIರಲ್ಲಿ ನಿರ್ದಿಷ್ಟಪಡಿಸಲಾಗಿರುವ ದರಗಳಲ್ಲಿ ರಾಜಧನವನ್ನು ಪಾವತಿಸತಕ್ಕದ್ದು. ಷೆಡ್ಯೂಲು-IIರ ಅಡಿಯಲ್ಲಿನ ದರಗಳನ್ನು 23 ಜೂನ್ 2007ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲ್ಪಟ್ಟಿದ್ದವು, ಅದರಿಂದಾಗಿ ಮುರ್ರಮ್, ಸಾಮಾನ್ಯ ಮರಳು ಹಾಗೂ ಕಟ್ಟಡ ಕಲ್ಲುಗಳ ಮೇಲಿನ ರಾಜಧನದ ದರವು ಮೆಟ್ರಿಕ್ ಟನ್ನು ಒಂದಕ್ಕೆ ₹ 5/–, ₹ 15/– ಹಾಗೂ ₹ 25/–ರಿಂದ ಅನುಕ್ರಮವಾಗಿ ₹ 10/–, ₹ 30/– ಹಾಗೂ ₹ 30/– ಕ್ಕೆ ಪರಿಷ್ಕೃತಗೊಂಡಿತು.

ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸುತ್ತೋಲೆ ನಿರ್ದೇಶನದ (ಡಿಸೆಂಬರ್ 2007) ಪ್ರಕಾರ, ಕರ್ನಾಟಕ ಲೋಕೋಪಯೋಗಿ ಇಲಾಖೆಯಂತಹ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು ಕಾರ್ಯಗತಗೊಳಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಗುತ್ತಿಗೆದಾರರು ಸಂಬಂಧಪಟ್ಟ ಇಲಾಖೆಗಳಿಗೆ ರಾಜಧನವನ್ನು ಪಾವತಿಸಿರುವುದಕ್ಕೆ ಪುರಾವೆಯನ್ನು ಒದಗಿಸುವಲ್ಲಿ ವಿಫಲವಾದಲ್ಲಿ, ಇಲಾಖೆಯು ಬಿಲ್ಲುಗಳಿಂದ ರಾಜಧನವನ್ನು ಕಳೆದುಕೊಳ್ಳತಕ್ಕದ್ದು.

ಮೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಒಂದು ಕಾಮಗಾರಿಯನ್ನು[11] ಕಾರ್ಯಗತಗೊಳಿಸಿದ್ದ ಓರ್ವ ಗುತ್ತಿಗೆದಾರರಾದ ಮೆ. ಪಿ.ಬಿ.ಐ ಕನ್ಸ್ಟ್ರಕ್ಷನ್ ಕಂಪನಿಯು 2010–11 ಮತ್ತು 2011–12 ಸಾಲುಗಳಲ್ಲಿ ಕಡಿದುಕೊಳ್ಳಲಾಗಿದ್ದ ರಾಜಧನ ಪಾವತಿಗಳು ಹಾಗೂ ಸರ್ಕಾರದ ಲೆಕ್ಕಕ್ಕೆ ಅವುಗಳನ್ನು ಪಾವತಿಸಿದ್ದರ ವಿವರಗಳೊಂದಿಗೆ ಚಾಲ್ತಿ ಖಾತೆ ಬಿಲ್ಲುಗಳನ್ನು ಸಲ್ಲಿಸಿದ್ದರು ಎಂಬುದನ್ನು ಬೆಳಗಾವಿಯ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಕಟ್ಟಡ ಕಲ್ಲುಗಳ ಕಲ್ಲುಗಣಿಗಾರಿಕೆಯ ದಾಖಲೆಗಳನ್ನು ಡಿಸೆಂಬರ್ 2013ರಲ್ಲಿ ಮಾಡಲಾದ ಪರೀಕ್ಷಾ ಪರಿಶೀಲನೆಯ ಸಮಯದಲ್ಲಿ ನಾವು ಗಮನಿಸಿದೆವು. ಚಾಲ್ತಿ ಖಾತೆ ಬಿಲ್ಲುಗಳನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಲಾಗಿ, ಮೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಕಡಿದುಕೊಳ್ಳಬೇಕಾಗಿದ್ದ ₹ 82.34 ಲಕ್ಷ (ಪರಿಷ್ಕೃತ ದರದಲ್ಲಿ) ಮೊತ್ತಕ್ಕೆ ಪ್ರತಿಯಾಗಿ ಕೇವಲ ₹ 41.33 ಲಕ್ಷ (ಪರಿಷ್ಕೃತಗೊಳ್ಳುವುದಕ್ಕೆ ಮೊದಲಿನ ದರದಲ್ಲಿ) ಮೊತ್ತವನ್ನು ಮಾತ್ರ ಕಡಿದುಕೊಂಡಿದ್ದಿತು. ಇದು ₹ 41.01 ಲಕ್ಷ ರಾಜಧನ ಕಡಿಮೆ ವಿಧಿಸುವಲ್ಲಿ ಪರಿಣಮಿಸಿತ್ತು ಎಂಬುದನ್ನು ಅದು ತೋರಿಸಿಕೊಟ್ಟಿತು. ವಿವರಗಳನ್ನು ಈ ಕೆಳಗಿನ **ಕೋಷ್ಟಕ 5.3** ರಲ್ಲಿ ನೀಡಲಾಗಿದೆ:

**ಕೋಷ್ಟಕ - 5.3**

**(₹ ಲಕ್ಷದಲ್ಲಿ )**

| ಅಪ್ರಧಾನ ಖನಿಜ | ರಾಜಧನವನ್ನು ಕಡಿದುಕೊಳ್ಳಲಾಗಿದ್ದ ಪರಿಮಾಣ (ಮೆಟ್ರಿಕ್ ಟನ್ನುಗಳಲ್ಲಿ) | ಪರಿಷ್ಕೃತ ದರಗಳಲ್ಲಿ ವಿಧಿಸಬೇಕಾದ ರಾಜಧನ | ಕಡಿದುಕೊಳ್ಳಲಾಗಿದ್ದ ರಾಜಧನ | ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದ ರಾಜಧನ |
|---|---|---|---|---|
| ಮುರ್ರಮ್ | 2,03,507.57 | 20.35 | 10.18 | 10.17 |
| ಕಟ್ಟಡ ಕಲ್ಲು | 2,05,144.37 | 61.54 | 30.77 | 30.77 |
| ಮರಳು | 1,508.70 | 0.45 | 0.38 | 0.07 |
| | | 82.34 | 41.33 | 41.01 |

ಚಾಲ್ತಿ ಖಾತೆ ಬಿಲ್ಲುಗಳನ್ನು ತನಗೆ ಸಲ್ಲಿಸಲಾಗಿದ್ದಿತಾದರೂ ಇಲಾಖೆಯು ರಾಜಧನವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದನ್ನು ಪತ್ತೆ ಹಚ್ಚಿರಲಿಲ್ಲ ಮತ್ತು ಆದ್ದರಿಂದ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದ ರಾಜಧನವನ್ನು ವಸೂಲಾತಿ ಮಾಡಲು ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.

[11] ಮೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕಾಗಿ, 2010–11 ಹಾಗೂ 2011–12 ಸಾಲುಗಳಲ್ಲಿ "ಪೀರನವಾಡಿಯಿಂದ ಗೋವಾವರೆಗೆ ರಸ್ತೆಗಳ ಅಭಿವೃದ್ಧಿಗಳು".

ಲೆಕ್ಕಪರಿಶೋಧನೆಯು ಇದನ್ನು ಸ್ಪಷ್ಟಪಡಿಸಿದನಂತರ, ಬಾಕಿ ಇರುವ ರಾಜಧನವನ್ನು ವಸೂಲಾತಿ ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿ ಬೆಳಗಾವಿಯ ಉಪ–ನಿರ್ದೇಶಕರು ತಿಳಿಸಿದರು (ಡಿಸೆಂಬರ್ 2013).

ಇದನ್ನು ಇಲಾಖೆಯ ಗಮನಕ್ಕೆ ನವಂಬರ್ 2013 ಹಾಗೂ ಜನವರಿ 2014ರಲ್ಲಿ ತರಲಾಯಿತು. ವಿಷಯವನ್ನು ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರವರ ಜೊತೆಯಲ್ಲಿಯೂ ಮೇ 2014ರಲ್ಲಿ ಕೈಗೆತ್ತಿಕೊಳ್ಳಲಾಯಿತು ಹಾಗೂ ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅವರುಗಳ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಅಕ್ಟೋಬರ್ 2014).



**(ಎಲ್. ಅಂಗಮ್ ಚಂದ್ ಸಿಂಘ್)**

**ಬೆಂಗಳೂರು** **ಪ್ರಧಾನ ಮಹಾಲೇಖಾಪಾಲರು**

**(ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)**

**ಕರ್ನಾಟಕ**

**ಮೇಲುರುಜು ಮಾಡಲಾಗಿದೆ**



**ನವದೆಹಲಿ** **(ಶಶಿ ಕಾಂತ್ ಶರ್ಮ)**

**ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**